




ಸಮುದ್ರದ ತಳದಲ್ಲಿ ಹೂತಿರುವ ಸುರಂಗವನ್ನು ಅಡ್ಡ ಕತ್ತರಿಸಿದರೆ ಕಾಣುವ ನೋಟ





ಮೀನು ಹಿಡಿಯುವವರಿಗಾಗಿ ಅಟ್ಟಣಿಗೆ (ಸೀ ಗಲ್ ಪೈರ್)

**ಸುರಂಗದ ವಿವರ**

| | |
|---|---|
| ಸುರಂಗದ ಒಳ ಭಾಗದ ವ್ಯಾಸ | 39 ಅಡಿ |
| ಸುರಂಗಕ್ಕೆ ಬಳಸಿರುವ ಸಿಮೆಂಟ್ ಕೊಳವೆಯ ದಪ್ಪ | 3ಅಡಿ |
| ನೀರಿನ ಮೇಲ್ಮೈನಿಂದ ಸುರಂಗವಿರುವಆಳ | 95 ಅಡಿ |
| ಸುರಂಗದೊಳಗಿರುವ ರಸ್ತೆಯ ಅಗಲ | 24 ಅಡಿ |
| ಸಾಗಬಲ್ಲ ವಾಹನದ ಎತ್ತರದ ಗರಿಷ್ಠ ಮಿತಿ | 13.5 ಅಡಿ |

ಒಂದು ಸುರಂಗಕ್ಕೆ ತಿಂಬಲ್ ಶೋಲ್ ಸುರಂಗವೆಂದೂ ಮತ್ತೊಂದು ಸುರಂಗಕ್ಕೆ ಚೆಸಪೀಕೆ ಕಾಲುವೆ ಸುರಂಗವೆಂದೂ ಹೆಸರಿಟ್ಟಿದ್ದಾರೆ.

| | |
|---|---|
| 1964 ರಿಂದ 2018ರ ಮೇ ವರೆಗೆ ಈ ಸೇತುವೆಗಳ ಮೂಲಕ ಹಾದು ಹೋದ ವಾಹನಗಳ ಸಂಖ್ಯೆ | 13ಕೋಟಿ! |
| ಮೊದಲನೇ ಸೇತುವೆಗೆ ಉಪಯೋಗಿಸಿದ ಕಂಬಗಳು | 2523 |
| ಕಂಬಗಳ ವ್ಯಾಸ | 4.5 ಅಡಿ |
| ಉಪಯೋಗಿಸಿದ ಕಾಂಕ್ರೀಟ್ | 825000 ಟನ್‌ಗಳು |
| ಉಕ್ಕು | 55000 ಟನ್‌ಗಳು |
| ಒಂದನೇ ಸೇತುವೆ ನಿರ್ಮಾಣದ ಕಾಲಾವಧಿ | 42 ತಿಂಗಳು |
| ಒಂದನೇ ಸೇತುವೆ ನಿರ್ಮಾಣದ ವೆಚ್ಚ | 200 ಕೋಟಿ ಡಾಲರ್ |
| ಎರಡನೇ ಸೇತುವೆ ನಿರ್ಮಾಣದ ಕಾಲಾವಧಿ | 48 ತಿಂಗಳು |
| ಎರಡನೇ ಸೇತುವೆ ನಿರ್ಮಾಣದ ವೆಚ್ಚ | 250 ಕೋಟಿ ಡಾಲರ್ |
| ಸೇತುವೆ ಇರುವಲ್ಲಿ ಸಮುದ್ರದ ಆಳ | 25 ರಿಂದ 100 ಅಡಿ |

ನಿರ್ಮಿಸಲು 2000ಕ್ಕಿಂತ ಹೆಚ್ಚು ಕೆಲಸಗಾರರು 42ತಿಂಗಳು ಕೆಲಸ ಮಾಡಿದ್ದಾರೆ. ಈ ಸೇತುವೆ ನಿರ್ಮಿಸುತ್ತಿರುವಾಗ 1962ರಲ್ಲಿ ಭೀಕರ ಬಿರುಗಾಳಿ ಬೀಸಿ, ಸಮುದ್ರ ರೌದ್ರಾವತಾರ ತಾಳಿ, ಅದರ ಹುಚ್ಚು ಅಲೆಗಳ ಬಡಿತಕ್ಕೆ ಒಂದು ಬುಲ್ಡೋಜರು, ನಿರ್ಮಾಣ ಹಂತದಲ್ಲಿದ್ದ ಒಂದು ಕೃತಕ ದ್ವೀಪ ಎಲ್ಲ ಕೊಚ್ಚಿಕೊಂಡು ಹೋಗಿದ್ದಂತೆ. ಈ ಸೇತುವೆ ನಿರ್ಮಾಣ ಪೂರ್ತಿಯಾಗುವಷ್ಟರಲ್ಲಿ ಏಳು ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರಂತೆ.

## ಪ್ರವಾಸಿ ತಾಣ

ಈ ಸೇತುವೆ ಮೇಲೆ ಹೋಗಲು ಕಾರುಗಳಿಗೆ $15 (ಡಾಲರ್) ಟೋಲ್ ಶುಲ್ಕ ನಿಗದಿ ಮಾಡಿದ್ದಾರೆ. ಬಿರುಗಾಳಿ ಹೊಡೆತಕ್ಕೆ ಕೆಲವು ವಾಹನಗಳು ಸೇತುವೆ ಮೇಲೆ ಹೋಗುವಾಗ ಪಲ್ಟಿಯಾಗಿದ್ದೂ ಇದೆ. ಹಾಗಾಗಿ ಗಾಳಿಯ ವೇಗ ಏನಾದರೂ ಗಂಟೆಗೆ 64ಕಿ.ಮೀ. ಗಿಂತ ಹೆಚ್ಚಿದ್ದರೆ, ಕೆಲವು ರೀತಿಯ ವಾಹನಗಳನ್ನು ಹೋಗಲು ಬಿಡುವುದಿಲ್ಲ. ಒಂದು ಮಾನವ ನಿರ್ಮಿತ ಕೃತಕ ದ್ವೀಪದಲ್ಲಿ ಉಡುಗೊರೆಗಳ ಮಾರಾಟ ಮಳಿಗೆ ಮತ್ತು ಉಪಾಹಾರ ಗೃಹ ಇತ್ಯಾದಿ ವ್ಯವಸ್ಥೆ ಇದೆ. ಮೀನು ಹಿಡಿಯುವವರಿಗಾಗಿ ಈ ದ್ವೀಪದಿಂದ ಸಮುದ್ರಕ್ಕೆ ಚಾಚಿಕೊಂಡಿರುವ 200ಮೀಟರ್ ಉದ್ದದ ಒಂದು ಅಟ್ಟಣಿಗೆ (ಸೀ ಗಲ್ ಪೈರ್) ಸಹ ನಿರ್ಮಿಸಿದ್ದಾರೆ.

ಚೆಸಪೀಕೆ ಕೊಲ್ಲಿ ಸೇತುವೆ ಸುರಂಗ ಈಗ ಪ್ರಸಿದ್ಧ ಪ್ರವಾಸಿ ತಾಣವೂ ಆಗಿದೆ. ಆದ್ದರಿಂದಲೇ ನಮ್ಮ ಮಗ ನಮ್ಮನ್ನು, ಈ ಸೇತುವೆ ತೋರಿಸಲು ಕರೆದುಕೊಂಡು ಹೋಗಿದ್ದ. ನೀಲಿ ಆಗಸದ ಕೆಳಗೆ, ನೀಲಿ ಸಮುದ್ರದ ನಡುವೆ, ಈ ಸೇತುವೆ ಮೇಲೆ ಮತ್ತು ಸುರಂಗಗಳ ಮೂಲಕ ಕಾರಿನಲ್ಲಿ ಹೋಗಿ ಬರುವುದೇ ಒಂದು ಅಪೂರ್ವ ಅನುಭವ.

**ನೆನಪಿಡಿ:** ಅಮೆರಿಕನ್ನರು 28.3 ಕಿ.ಮೀ.ಉದ್ದದ ಸುರಂಗ ಸಹಿತ ಮೊದಲ ಸೇತುವೆ ಕಟ್ಟಲು ತೆಗೆದುಕೊಂಡಿದ್ದು ಕೇವಲ ಮೂರೂವರೆ ವರ್ಷ. ಭಾರತದಲ್ಲಿ ರಾಮೇಶ್ವರದ ಬಳಿ 2345 ಕಿ.ಮೀ ಉದ್ದದ ರಸ್ತೆ ಮೇಲ್ಸೇತುವೆ ಕಟ್ಟಲು ತೆಗೆದುಕೊಂಡಿದ್ದು ಬರೋಬ್ಬರಿ ಹದಿನಾಲ್ಕು ವರ್ಷಗಳು!